ಪ್ರತಿನಿಧಿಗಳ ಒಂದು ಸಭೆಯನ್ನು ಕರೆದಿದ್ದರು. ಅದರಲ್ಲಿ ಆಂಧ್ರಸರ್ಕಾರ ಪ್ರತಿನಿಧಿಗಳನ್ನು ಕಳಿಸಿಲ್ಲ, ಮಹಾರಾಷ್ಟ್ರ ಮತ್ತು ಕರ್ನಾಟಕದ ಪ್ರತಿನಿಧಿಗಳು ಭಾಗವಹಿಸಿದ್ದರು. ಆ ಸಭೆಯಲ್ಲಿ ನಮ್ಮ ನಿಲುವನ್ನು ಸ್ಪಷ್ಟೀಕರಣ ಮಾಡಿದ್ದೇವೆ. ಅದರ ಬಗ್ಗೆ ಕೇಂದ್ರ ಸರ್ಕಾರದವು ಮತ್ತೊಂದು ಸಭೆಯನ್ನು ಕರಯತಕ್ಕಂಥ ಸನ್ನಿವೇಶ ಇದೆ. ಈ ಹಿನ್ನೆಲೆಯಲ್ಲಿ ತೆಲುಗು ಗಂಗಾ ಯೋಜನೆಯು ಒಂದು ಸನ್ನಿವೇಶ ಇದೆ.

ಶ್ರೀ ಶಿವನಂಜಪ್ಪ ಸಿದ್ದಪ್ಪ ಕಡಪಟ್ಟಿ.—ಈಗಾಗಲೇ ಸನ್ಮಾನ್ಯ ಮಂತ್ರಿಗಳು ಈ ಹಿಂದೆ ಇದೇ ಸದನದಲ್ಲಿ ಇದರ ಬಗ್ಗೆ ಉತ್ತರ ಹೇಳಿದ್ದರು. ಅದರಿಂದ ಸಂತೋಷವಾಗಿದೆ. ಆದರೆ ಸನ್ಮಾನ್ಯ ಮಂತ್ರಿಗಳು ೧೯೯೫ರ ಒಳಗೆ ಕೃಷ್ಣ ಕಣಿವೆಯ ಸಂಪೂರ್ಣ ನೀರನ್ನು ಬಳಸಿಕೊಂಡು ಎರಡು ಸಾವಿರ ವರ್ಷಗಳಿಗೆ ಹೆಚ್ಚುವರಿ ನೀರನ್ನು ಪಡೆಯಲು ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾದರೆ ಒಳ್ಳೆಯದಾಗುತ್ತದೆ ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.— ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ನಾವು ನೀವು ಇಬ್ಬರು ಕುಳಿತುಕೊಂಡು ಆಲೋಚನೆ ಮಾಡೋಣ.

ಪ್ರಶ್ನೆ ಸಂಖ್ಯೆ ೨೦೭ (೬೬೮)

ಅಧ್ಯಕ್ಷರು.—ಶ್ರೀ ಆರ್.ಎನ್. ನಾಯ್ಡು (ಭಟ್ಕಳ್) ಗೈರುಹಾಜರಿ.

ಪ್ರಶ್ನೆ ಸಂಖ್ಯೆ ೨೦೮ (೫೮೭)

ಅಧ್ಯಕ್ಷರು.—ಶ್ರೀಮತಿ ಶಿವಕಾಂತಾ ಜೆ.ಚತುರೆ (ಹುಲಸೂರು) ಗೈರುಹಾಜರಿ.

ಮಲಪ್ರಭಾ ಯೋಜನೆಯ ಮೇರೆಗೆ ಮುಳುಗಡೆಯಾದ ಗ್ರಾಮಗಳ ಪುನರ್ ವಸತಿ

೨೦೯ (೭೨೫) ಶ್ರೀ ಚಂದ್ರಶೇಖರ ಮಮಾನಿ (ಪರಸ್‌ಗಡ್).—ಮಾನ್ಯ ಲೋಕೋಪಯೋಗಿ ಜಲಾನಯ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮಲಪ್ರಭಾ ಯೋಜನೆ ಅಡಿಯಲ್ಲಿ ಮುಳುಗಡೆಯಾದ ಸವದತ್ತಿ ತಾಲ್ಲೂಕಿನ ಕೆಲವು ಪುನರ್ ವಸತಿ ಗ್ರಾಮಗಳಲ್ಲಿ ಕಟ್ಟಿಸಲಾದ ಶಾಲೆ, ದೇವಸ್ಥಾನ ರಸ್ತೆ, ಸಮಾಜ ಮಂದಿರ ಮುಂತಾದ ಕೆಲಸಗಳ ದುರಸ್ತಿ ಕಾರ್ಯ ಆಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ದುರಸ್ತಿ ಕಾರ್ಯವನ್ನು ಸರ್ಕಾರದವರು ಕೈಗೊಳ್ಳುವರೆ, ಹಾಗೂ ಸದರಿ ಕೆಲಸಕ್ಕೆ ಪುಸಕ್ತ ಮಂಜೂರಿ ಪತ್ರದಲ್ಲಿ ಹಣ ಕಾಯ್ದಿರಿಸಲಾಗಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಸರಕಾರದ ಆಜ್ಞೆ ನಂ. ಪಿಡಿ-೧೬-ಸಿಎಂಜಿ-೮೧ ದಿನಾಂಕ ೧-೭-೮೨ರಂತೆ ಈ ಕಾರ್ಯಗಳು ನೀರಾವರಿ ಇಲಾಖೆಯಿಂದ ಪೂರೈಸಿದ ಮೇಲೆ ಆಯಾ ಇಲಾಖೆಗಳಿಗೆ ಪಹಿಸಲಾಗಿದೆ. ಮತ್ತು ದುರಸ್ತಿ ಕಾರ್ಯಗಳನ್ನು ಆಯಾ ಇಲಾಖೆಯ ವತಿಯಿಂದ ಮಾಡಲಾಗುವುದು.

ಅವರು ಕೇಳಿರತಕ್ಕಂಥ ಪ್ರಶ್ನೆ ಪುನರ್ವಸತಿ ಮಾಡತಕ್ಕಂಥ ಕೆಲಸವನ್ನು ಮೈನರ್ ಟಿನೆನ್ಸ್ ಯಾರು ಮಾಡಬೇಕು ಎನ್ನುವುದರ ಬಗ್ಗೆ ಕೇಳಿದ್ದಾರೆ. ನಾವು ಪುನರ್ ವಸತಿ ಕಾರ್ಯಕ್ರಮ ಮುಗಿಸಿದ ಮೇಲೆ ನಮ್ಮ ಜವಾಬ್ದಾರಿ ಅಲ್ಲಿಗೇ ಮುಗಿದು ಹೋಗುತ್ತದೆ. ಆಯಾಯ ಇಲಾಖೆಯವರು ಅದರ ಮೇಂಟಿನೆನ್ಸ್ ಮಾಡುವ ಬಗ್ಗೆ ಅದರ ಪ್ರಕಾರ ಅವರು ಮಾಡಿಕೊಂಡು ಹೋಗಬೇಕಾಗುತ್ತದೆ. ಆ ರೀತಿಯಾಗಿ ಸರ್ಕಾರದವರ ಹುಕುಂ ಇದೆ. ಆ ಕೆಲಸವನ್ನು ಮಾಡಿಕೊಂಡು ಹೋಗಬೇಕು. ಆ ಮೇಟಿನೆನ್ಸ್ ಅನ್ನು ನಾವುಗಳು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಚಂದ್ರಶೇಖರ್ ಪುವಾನಿ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುತ್ತೇನೆ. ಪುನರ್‌ವಸತಿ ಕಾರ್ಯಕ್ರಮಗಳಲ್ಲಿ ಕಟ್ಟಿಸಲಾದ ಶಾಲೆ, ದೇವಸ್ಥಾನ, ಗಸ್ತೆ, ಸಮಾಜ ಮಂದಿರಗಳನ್ನು ಕಳೆದ ೨೦ ವರ್ಷಗಳಿಂದಲೂ ಹಾಗೆಯೇ ಬಿಡಲಿಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ.—ಇಪ್ಪತ್ತು ವರ್ಷಗಳು ಏತಕ್ಕೆ ಬಿಟ್ಟರು ಎಂದು ಕಾರಣ ಹುಡುಕಬೇಕಾದರೆ ನಾವು ಇಬ್ಬರು ಸೇರಿ ಹುಡುಕಬೇಕಾಗುತ್ತದೆ. ನಾನು ಈಗ ಹೇಳುವುದಕ್ಕೆ ಆಗುವುದಿಲ್ಲ. ಈಗ ಇರತಕ್ಕದ್ದು ೩೩ ಕೇಂದ್ರಗಳಲ್ಲಿ ೨೮ನ್ನು ಮುಗಿಸಿದ್ದೇವೆ. ಇನ್ನು ೫ ಕೆಲಸ ಮುಗಿಯುವ ಹಂತದಲ್ಲಿ ಇದೆ. ಅದನ್ನು ಅತಿ ಶೀಘ್ರವಾಗಿ ಮುಗಿಸುತ್ತೇವೆ. ಇದಕ್ಕಾಗಿ ೧.೫೦ ಲಕ್ಷ ರೂಪಾಯಿಯನ್ನು ಪುನರ್‌ವಸತಿ ಕೆಲಸಕ್ಕಾಗಿಯೇ ಉಪಯೋಗಿಸುತ್ತಿದ್ದೇವೆ.

ಶ್ರೀ ಚಂದ್ರಶೇಖರ ಪುವಾನಿ.—ಆಯಾಯ ಇಲಾಖೆಗಳಲ್ಲಿ ವರ್ಗಾಯಿಸಿದ ಮೇಲೆ ಆಯಾಯ ಇಲಾಖೆಯವರು ಒಂದಾದರೂ ಕೆಲಸ ಮುಗಿಸಿದ್ದಾರೆಯೇ ? ಮತ್ತು ಮುಂಗಡ ಪತ್ರದಲ್ಲಿ ಹಣ ವನ್ನು ಕಾಯ್ದಿರಿಸಿದ್ದಾರೆಯೇ ? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಉಳಿದಿರತಕ್ಕ ಇನ್ನು ೫ ಪುನರ್‌ವಸತಿ ಕೇಂದ್ರಗಳಲ್ಲಿ ವಿವಿಧ ಹಂತದಲ್ಲಿ ಅದನ್ನು ಮುಗಿಸುವ ವ್ಯವಸ್ಥೆ ಮಾಡಲಾಗಿದೆ. ಮುಂಗಡಪತ್ರದಲ್ಲಿ ಹಣ ಇರಲಿ, ಇಲ್ಲದೇ ಇರಲಿ, ಆ ಕೆಲಸವನ್ನು ಮುಗಿಸಿಕೊಡುತ್ತೇವೆ. ಬೇರೆ ಇಲಾಖೆಯ ಮೆಯಿನ್‌ಟೆನೆನ್ಸ್ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುವುದಕ್ಕೆ ಆಗುವುದಿಲ್ಲ.

(ಪ್ರಶ್ನೋತ್ತರ ವೇಳೆ ಮುಗಿಯಿತು)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಉತ್ತರ ಕನ್ನಡ ಜಿಲ್ಲೆಯಲ್ಲಿ ಮರಗಳನ್ನು ನೆಡುವುದು

೨೦೭ (೬೬೮) ಶ್ರೀ ಆರ್.ಎನ್. ನಾಯ್ಕ (ಭಟ್ಕಳ್).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಗಿಡ ನೆಡಲು ಸಾಧ್ಯವಾಗುವಂತ ಅರಣ್ಯ ಖಾತೆಗೆ ಸೇರಿದ ಕ್ಷೇತ್ರ ಎಷ್ಟು ?

ಆ) ೧೯೮೧–೮೨, ೧೯೮೨–೮೩, ೧೯೮೩–೮೪, ೧೯೮೪–೮೫ ಮತ್ತು ೧೯೮೫ನೇ ಸಾಲುಗಳಲ್ಲಿ ಅನುಕ್ರಮವಾಗಿ ಎಷ್ಟೆಷ್ಟು ಕ್ಷೇತ್ರದಲ್ಲಿ ಗಿಡ ನೆಡಲಾಗಿದೆ ?

ಇ) ಈ ಹಿಂದೆ ಐದು ವರ್ಷಗಳಲ್ಲಿ ನೆಟ್ಟ ಗಿಡಗಳು ಬದುಕಿವೆಯೇ ?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೊನ್ನಾವರ, ಕುಮಟಾ ಮತ್ತು ಭಟ್ಕಳ ತಾಲ್ಲೂಕಿನಲ್ಲಿ ಗಿಡ ನೆಡಲು ಸಾಧ್ಯವಾಗುವಂತಹ ಒಟ್ಟು ೧೨೫೦೦ ಹೆಕ್ಟೇರು ಪ್ರದೇಶ ಈ ಕೆಳಗೆ ಕಂಡಂತೆ ಇದೆ :

೧)	ಹೊನ್ನಾವರ ತಾಲ್ಲೂಕು	೪೦೦೦ ಹೆಕ್ಟೇರು
೨)	ಕುಮಟಾ ತಾಲ್ಲೂಕು	೪೦೦೦ ,,
೩)	ಭಟ್ಕಳ ತಾಲ್ಲೂಕು	೪೫೦೦ ,,
	ಒಟ್ಟು	೧೨೫೦೦ ಹೆಕ್ಟೇರು